ನನಗನಿಸುತ್ತೆ ಈತ ಇತ್ತಲೋ ಅತ್ತಲೋ ಒಂದು ಕಡೆ ಸೆಟಲ್ ಆಗಬೇಕು, ಬೇಗ. ಇಲ್ಲದಿದ್ದರೆ ಎಲ್ಲರಿಗೂ ಕಷ್ಟ. ನಮ್ಮ ಆಸ್ಪತ್ರೆ ಇರೋದು ಸಂಪ್ರದಾಯಬದ್ಧ ನೆರೆಹೊರೆಯಲ್ಲಿ. ಮೇಲಾಗಿ ಇಲ್ಲಿ ಅನೇಕ ಸೊಮಾಲಿಯಾ, ಸುಡಾನಿನ ರೋಗಿಗಳೂ ಬರುತ್ತಾರೆ. ಅವರೆಲ್ಲ ನಮಗೆ ಹೆಂಗಸರು ಡಾಕ್ಟರು ಮಾತ್ರ ಬೇಕು ಅಂತ ಕೇಳ್ತಾರೆ. ಮೇಕಪ್ ಹಾಕಿದಾನೆ ಅಂತ ಈತನನ್ನು ಕಳಿಸೋಕೆ ಆಗುತ್ತಾ? ಮುಂದೆ ಈತ ಪೂರಕ್ಕೆ ಪೂರ ತಾನು ಹೆಣ್ಣು ಅಂತ ಹೇಳಿಕೊಳ್ಳೋ ಮಟ್ಟಿಗೆ ಹೆಣ್ಣಾಗೋಕಾಗುತ್ತಾ?' ಕೇಳಿದಳು.

ಶೆರಿಲ್, 'ಗುಡ್ ಲಕ್. ನನಗೆ ಈ ತರ ಸಮಸ್ಯೆಗಳನ್ನು ನಿಭಾಯಿಸೋ ತಾಪತ್ರಯವಿಲ್ಲ, ನೋಡು' ಎಂದು ನನ್ನ ನೋಡಿ ಕಣ್ಣು ಹೊಡೆದಳು.

ನಂತರ ನಾನು ಒಮ್ಮೆ ಮಾತ್ರ ಆತನನ್ನು ಭೇಟಿಯಾಗಿದ್ದು. ಇನ್ನೊಂದು ಮೀಟಿಂಗಿಗೆಂದು ಹೋದಾಗ. ನಮ್ಮ ಎಲ್ಲ ಆಸ್ಪತ್ರೆಗಳ ಗುಂಪನ್ನು ವೆಸ್ಟ್‌ಹೆಲ್ತ್ ಎಂಬ ಇನ್ನೊಂದು ದೊಡ್ಡ ಕಾರ್ಪೊರೇಟ್ ಕೊಳ್ಳುವ ಸನ್ನಾಹದಲ್ಲಿತ್ತು. ಆ ಸಲುವಾಗಿ ಈ ಮೀಟಿಂಗು. ಅವನ ದೇಹದಲ್ಲಿ ಇನ್ನೂ ಹೆಚ್ಚು ಹೆಣ್ಣುತನ ಕಾಣುತ್ತಿತ್ತು. ನನ್ನ ಕಣ್ಣು ಬೇಡ ಬೇಡವೆಂದರೂ ಆತನ ದೇಹದ ಮೇಲೇ ಹೋಗುತ್ತಿತ್ತು. ಆತನ ಹೆಣ್ಣುತನದ ಅಸಲೀ ನಕಲೀತನದ ಬಗ್ಗೆ ಕೆಟ್ಟ ಕುತೂಹಲ. ಲಿಂಗ ಬದಲಾವಣೆಯ ಆಪರೇಷನ್‌ಗಳ ಬಗ್ಗೆ ಕೊಂಚ ಓದಿಕೊಂಡಿದ್ದರೂ ನನ್ನ ಕಣ್ಣಮುಂದೆಯೇ ಆಗುತ್ತಿರುವ ಬದಲಾವಣೆಗೆ ನಾನು ಹೇಗೆ ಪ್ರತಿಕ್ರಿಯಿಸಬೇಕೆಂದು ಗೊತ್ತಾಗುತ್ತಿರಲಿಲ್ಲ. ಆತನ ಹೆಸರು ಮಾತ್ರ ಇನ್ನೂ ಮಾರಿಸ್ ಅಂತಲೇ ಇತ್ತು. ಆ ಮೀಟಿಂಗಿನಲ್ಲಿ ಆತ ವೇದಿಕೆಯ ಮೇಲೆ ನಿಂತು ಪ್ರಸ್ತುತಪಡಿಸುತ್ತಿದ್ದಾಗ ಆತ ಹಾಕಿದ್ದ ಲೆಗಿಂಗ್ಸ್ ಮತ್ತು ಮೇಲಿನ ಬ್ಲೌಸ್ ಕಾಣಿಸಿತ್ತು. ಬ್ಲೌಸಿನಡಿಯ ಹೆಣ್ಣುತನವನ್ನೇನೋ ದಿರಿಸುಗಳ ಚಮತ್ಕಾರ ಎಂದರೂ ಲೆಗ್ಗಿಂಗ್ಸ್ ನಡುವೆ ಬೇಡವೆಂದರೂ ಕಣ್ಣು ಹರಿದು ಅಲ್ಲಿನ ಉಬ್ಬನ್ನೋ ತಗ್ಗನ್ನೋ ಹುಡುಕಿ, ಕಂಡಂತಾದರೂ ಮಾಯವಾಯಿತೆನಿಸಿ ಇದೂ ಕೂಡ ವಾರ್ಡ್‌ರೋಬ್ ಮಾಲ್‌ಫಂಕ್ಷನೋ ಅಥವಾ ಈಸ್ಟ್ರೋಜನ್‌ನ ಪರಿಣಾಮವೋ ಅಥವಾ ಮಾರಿಸನ ಘನಪೌರುಷಕ್ಕೆ ಯಾರಾದರೂ ಸರ್ಜನು ಕತ್ತರಿಯಾಡಿಸಿದ್ದಾನೋ ಎಂಬ ಅನುಮಾನ ಹಾಗೇ ಉಳಕೊಂಡಿತ್ತು. ಒಟ್ಟಾರೆ ಈತನಿಗೆ ಗಂಡಸಾಗಿಯಾಗಲೀ, ಹೆಂಗಸಾಗಿಯಾಗಲೀ ತನ್ನನ್ನು ತಾನು ಬಹಳ ಗ್ರೇಸ್‌ಫುಲ್ಲಾಗಿ ಪ್ರೆಸೆಂಟ್ ಮಾಡಿಕೊಳ್ಳುವ ಕಲೆ ಗೊತ್ತಿದೆ ಎಂದನ್ನಿಸಿತ್ತು. ಅಂದು ಪುಣ್ಯಕ್ಕೆ ಶೆರಿಲ್ ನನ್ನ ಜತೆ ಬಂದಿರಲಿಲ್ಲ. ಆತ ಬಾತ್‌ರೂಮಿಗೆ ಹೋಗಬೇಕೆನಿಸಿದರೆ ಗಂಡಸರ ಕಡೆ ಹೋಗುತ್ತಾನೋ, ಹೆಂಗಸರ ಕಡೆ ಹೋಗುತ್ತಾನೋ ಗಮನಿಸಬೇಕೆನಿಸಿತು. ಮೂರುಗಂಟೆಗಳ ಮೀಟಿಂಗಿನಲ್ಲಿ ಆತ ಒಮ್ಮೆಯೂ ಬಾತ್‌ರೂಮಿಗೆ ಹೋಗಲಿಲ್ಲ. ನಾವೆಲ್ಲ ಹೋದಾಗ ಆತ ಹೊರಗಡೆ ಫೋನು ಮಾಡುತ್ತಾ ನಿಂತಿದ್ದ.

ನಂತರ ಆತ ನನಗೆ ಸಿಕ್ಕಿದ್ದು ಇಂದೇ.

★★★

ಇಷ್ಟರಲ್ಲಿ ನಮ್ಮ ಎಲ್ಲ ಆಸ್ಪತ್ರೆಗಳ ಗುಂಪನ್ನು ವೆಸ್ಟ್‌ಹೆಲ್ತ್‌ನವರು ಕೊಂಡುಕೊಳ್ಳುವುದು ಪಕ್ಕಾ ಆಗಿತ್ತು. ಈ ಹೊಸ ಕಾರ್ಪೊರೇಟುಗಳ ಮರ್ಜರ್ ಆಗಬೇಕಾದರೆ, ಕೆಲವು ಹಳೆತಲೆಗಳು ಉರುಳುತ್ತವೆ, ಹೊಸಬರು ಸೇರಿಕೊಳ್ಳುತ್ತಾರೆ. ಯಾರು ಉಳಕೊತಾರೆ, ಯಾರು ಹೋಗುತಾರೆ ಎಂಬ ಗುಸುಗುಸು ಎಲ್ಲೆಡೆ. ಇದೇ ಸಮಯದಲ್ಲಿ ಆಸ್ಪತ್ರೆಯಿಂದ ಕಡ್ಡಾಯವಾಗಿ ಕಳಿಸಿದ ಈ ಲೀಡರ್‌ಶಿಪ್ ಸೆಮಿನಾರು ಬೇರೆ. ಅದಕ್ಕೆಂದೇ ನಾನು ಇಲ್ಲಿಗೆ ಬಂದದ್ದು. ನಾನು